**Code No. 08 X(B)**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಬೆರಳಚ್ಚು – ಪ್ರೌಢ ದರ್ಜೆ – ಪ್ರಥಮ ಪತ್ರಿಕೆ

ಜುಲೈ, 2015

ಸಮಯ : 15 ನಿಮಿಷಗಳು

ಅಂಕಗಳು : 100

***ಸೂಚನೆಗಳು :*** 1) ಈ ಕೆಳಗೆ ಕೊಟ್ಟಿರುವ ವಿಷಯವನ್ನು 10 ರಿಂದ 75 ಸ್ಥಾನಗಳಿಗೆ ಅಂಚಿನ ತಡೆಗಳನ್ನು ಸ್ಥಿರಪಡಿಸಿಕೊಂಡು ಎರಡು ಸಾಲುಗಳ ತೆರಪಿನಲ್ಲಿ ಬೆರಳಚ್ಚು ಮಾಡಬೇಕು.

2) ಕಾಗದದ ಒಂದು ಭಾಗದಲ್ಲಿ ಮಾತ್ರ ಬೆರಳಚ್ಚು ಮಾಡಬೇಕು.

3) ತಪ್ಪಿಲ್ಲದೆ ಅಂದವಾಗಿ ಬೆರಳಚ್ಚು ಮಾಡಲು ವಿಶೇಷ ಗಮನ ಕೊಡಬೇಕು.

---

ಮಾನವ ಸಂಘಜೀವಿ, ಸಮಾಜ ಜೀವಿ, ಪರಸ್ಪರ ಆಲೋಚನೆಗಳು, ವಿಚಾರ ಮತ್ತು ಭಾವನೆಗಳ ವಿನಿಯೋಗಕ್ಕಾ ಸಂವಹನ ಅತಿ ಅವಶ್ಯ. ಸಂಪರ್ಕ ಇಂದು ಮಾನವನಿಗೆ ಅತಿ ಅವಶ್ಯಕವಾಗಿದೆ, ಇದು ಇಲ್ಲದೆ ತಾನು ಉಳಿಯಲಾರ, ಹಸಿವು ನೀರಡಿಕೆಗಳು ಹೇಗೆ ಅವಶ್ಯ ಅಂಶಗಳೊ ಸಂವಾಹನವನ್ನು ಹಾಗೆಯೇ ಮಾನವ ಜೀವನದ ಮೂಲಭೂತ ಅಗತ್ಯ. ತನ್ನ ಪರಿಸರವನ್ನು ಎಲ್ಲರಲ್ಲಿ ಹಂಚಬೇಕಾಗಿದ ಅಭಿವ್ಯಕ್ತಿ ಸಹಜವಾಗಿಯೇ ಉತ್ಪನ್ನ ಆಗುವಂತಹ, ಸಮಾಜದ ಹಂದರ ಸಂವಾಹನವನ್ನು ಅವಲಂಭಿಸಿದೆ. ಇಂದು ಮನುಷ್ಯನ ದೇಹದಲ್ಲಿ ರಕ್ತಹರಿಯುವ ರೀತಿಯಲ್ಲಿ ಸಮಾಜದಲ್ಲಿ ಸಂವಾಹನ ಹರಿಯುತ್ತದೆ. ಇದಲ್ಲದೆ ಮಾನವನಿಗೆ ಎಲ್ಲವನ್ನೂ ತಿಳಿಯುವ ಆಸಕ್ತಿ, ಅವನ ಜ್ಞಾನ ಪಿಪಾಸೆಯನ್ನು ತಣಿಸಲು ಸಮೂಹ ಮಾಧ್ಯಮಗಳಾದ ಪತ್ರಿಕೆ, ಪುಸ್ತಕ, ಬಾನುಲಿ, ನಿಯತಕಾಲಿಕ ದೂರದರ್ಶನ ಮತ್ತು ಚಲನಚಿತ್ರ, ಮಾಹಿತಿ ಮತ್ತು ಜ್ಞಾನವನ್ನು ನಿರಂತರವಾಗಿ ಹರಡುವ ಕೆಲಸದಲ್ಲಿ ತೊಡಗಿದೆ, ಆದ್ದರಿಂದ ಅವು ಮಾನವ ಎಲ್ಲೆಲ್ಲಿ ಇರುವನೋ ಇವು ಅಲ್ಲೆಲ್ಲಾ ಇವೆ. ಅಂದರೆ ಅವು ಸರ್ವಾತ ಆಗಿರುವುವು.

ನಮ್ಮ ಸಾಮಾಜಿಕ ವಿಧಾನಗಳು ಪರಿವರ್ತನೆ ಆದಂತೆ ಸಾಮಾಜಿಕ ಮತ್ತು ಸಾರ್ವಜನಿಕ ಮೌಲ್ಯಗಳು ಪರಿವರ್ತನೆ ಆಗುತ್ತದೆ. ಹಿಂದೆ ಪರಿವರ್ತನೆಯ ಕ್ರಿಯೆ ಸ್ವಲ್ಪ ನಿಧಾನವಾಗಿ ಆಗುತ್ತಿತ್ತು. ಆಧುನಿಕ ಯುಗದಲ್ಲಿ ಶೀಘ್ರವಾಗಿ ಬದಲಾವಣೆ ಆಗುತ್ತದೆ. ಸಮೂಹ ಮಾಧ್ಯಮಗಳು ಇದಕ್ಕೆ ಕಾರಣ. ಏಕೆಂದರೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವ್ಯಕ್ತಿಯಿಂದ ವ್ಯಕ್ತಿಗೆ ಕ್ಷಣ ಕ್ಷಣಕ್ಕೆ ರವಾನೆ ಆಗುತ್ತದೆ. ಇಡೀ ಜಗತ್ತೇ ಇದರಿಂದ ಸಣ್ಣದಾದಂತೆ ಭಾಸವಾಗುತ್ತದೆ.

[ Turn over

ಸಮೂಹ ಸಂಪರ್ಕ ಮಾಧ್ಯಮಗಳಿಂದ ಈ ಬಗೆಯ ಸಮೂಹ ಸಂಪರ್ಕ ಸಾಧ್ಯವಾಗಿದೆ ಎಂದು ಹೇಳಬಹುದು. ಇಲ್ಲಿ ಸಮೂಹ ಎಂದರೆ ಗುಂಪು ಎಂಬರ್ಥ. ಸಂಖ್ಯೆ ಹೆಚ್ಚು ಇದ್ದಷ್ಟು ಉತ್ತಮ. ಅಂದರೆ ಇಂತಿಷ್ಟೆ ಎಂಬ ನಿಯಮವಿಲ್ಲ. ಪಾರಂಪಾರಿಕ ಮಾಧ್ಯಮಗಳಲ್ಲಿ ವೀಕ್ಷಕರ ಸಂಖ್ಯೆ ಕೆಲವು ನೂರು ಆದರೆ ದೂರದರ್ಶನ ಕಾರ್ಯಕ್ರಮಗಳಿಗೆ ಲಕ್ಷಾಂತರ ಮಂದಿ ನೋಡುಗರು ಇರಬಹುದು. ರಾಮಾಯಣ ಮತ್ತು ಮಹಾಭಾರತ ಧಾರವಾಹಿಗಳು ಜನಪ್ರಿಯ ನಾಟಕಗಳು, ಇದಕ್ಕೆ ಉತ್ತಮ ಉದಾಹರಣೆ. ಏಕಕಾಲದಲ್ಲಿ ಅನೇಕರನ್ನೂ, ಅನೇಕ ದೇಶಗಳನ್ನೂ ತಲುಪುವ ಶಕ್ತಿ ಸಮೂಹ ಮಾಧ್ಯಮವೇ ಇದೆ.

ಸಮೂಹ ಮಾಧ್ಯಮದ ಜವಾಬ್ದಾರಿ ಸುದ್ದಿ, ವರದಿ ಶಿಕ್ಷಣ ಜನಪ್ರಿಯತೆಗೆ ಸೀಮಿತವಲ್ಲ. ಆದರೆ ಅದಕ್ಕೂ ಮಿಗಿಲಾದ ಸಾಮಾಜಿಕ ಸೌಹಾರ್ದತೆ, ಸಾಮಾಜಿಕ ಕಳಕಳಿ, ಸಮಾಜದ ಒಳಿತು ಮತ್ತು ಸಾಮಾಜಿಕ ಜವಾಬ್ದಾರಿಯಿದೆ. ಅವು ತಾವು ಕೆಲಸ ಮಾಡುತ್ತಿರುವ ಸಮಾಜದ ಹಿತವನ್ನು ಕಡೆಗಣಿಸಬಾರದು. ಆಯಾ ದೇಶದ ರಾಜಕೀಯ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಭದ್ರತೆಗೆ ಶಕ್ತಿ ಮೀರಿ ದುಡಿಯಬೇಕು. ಒಂದೊಂದು ದೇಶದಲ್ಲಿ ಒಂದೊಂದು ಬಗೆಯ ಜವಾಬ್ದಾರಿ ಇದೆ. ಭಾರತದಂತಹ ವಿಕಾಸಶೀಲ ರಾಷ್ಟ್ರದಲ್ಲಿ ಮಾಧ್ಯಮಗಳ ಕರ್ತವ್ಯ ಬಡತನ, ಅನಕ್ಷರತೆ, ನಿರುದ್ಯೋಗ, ಜಾತಿ, ಲಿಂಗ ಅಸಮಾನತೆ ನಿವಾರಣೆ, ಅದರೊಡನೆಯೇ ಜನತಂತ್ರವನ್ನು ರಕ್ಷಿಸುವುದು. ಮುಂದುವರಿದ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಹಿಂದೆ ಕ್ರೌರ್ಯ, ಮಾದಕ ವಸ್ತು ಸೇವನೆ, ದಾರಿದ್ರ್ಯ ಮತ್ತಿತರ ಸಾಮಾಜಿಕ ಪಾಪಗಳ ಜಾಲದಿಂದ ಜನತೆಯನ್ನು ಮುಕ್ತಿಗೊಳಿಸಬಹುದು. ಇದಕ್ಕಾಗಿ ಲೇಖನ ಸಮರವನ್ನು ಕೈಗೊಳ್ಳಬೇಕು. ಸಮಾಜದಲ್ಲಿ ನೆಮ್ಮದಿ ನೆಲೆಸುವಂತೆ ಮಾಡುವಲ್ಲಿ ಸಮೂಹ ಮಾಧ್ಯಮ ಹೆಚ್ಚು ಕಾರ್ಯಗಳನ್ನು ಮಾಡಬೇಕು. ಸಮೂಹ ಮಾಧ್ಯಮಗಳು ಒಂದು ವಿಧದಲ್ಲಿ ಸಾಮಾಜಿಕ ಸಂಸ್ಥೆಗಳು.

ಸಂವಹನ ವಿಧಾನದಲ್ಲಿ ಇರುವ ಅಡೆತಡೆಗಳಲ್ಲಿ ಎರಡು ವಿಧಗಳು. ಇವುಗಳನ್ನು ಶಬ್ದ ಎನ್ನುವರು. ಒಂದನೇಯದು ಭೌತಿಕ ಶಬ್ದ. ಮಾಧ್ಯಮದ ಮೂಲಕ ಸಂದೇಶ ಹರಿದು ಬರುವಾಗ ಉಂಟಾಗುವ ಅಸ್ತವ್ಯಸ್ತತೆ ಈ ವರ್ಗಕ್ಕೆ ಬರುತ್ತದೆ. ಗಮನ ಸೆಳೆಯುವ ತಂತ್ರ, ವರ್ತನೆಯ ತಂತ್ರ ಸಹ ಇದರಲ್ಲಿ ಒಂದಾಗಿದೆ.